**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 11 ಸೇಆನ್ಯಾ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:19.02.2018

**ಜಾಹೀರಾತು**

ವಿಷಯ: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯ ಹುದ್ದೆಗಳ ನೇಮಕಾತಿ ಬಗ್ಗೆ.

*****

ಕರ್ನಾಟಕ ಸರ್ಕಾರವು ಬೆಳಗಾವಿ ಮತ್ತು ಕಲಬುರಗಿಯಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಎರಡು ಹೆಚ್ಚುವರಿ ಪೀಠಗಳನ್ನು ಸ್ಥಾಪನೆ ಮಾಡಿದೆ. ಈ ಪೀಠಗಳಲ್ಲಿನ ತಲಾ ಒಂದು "ಆಡಳಿತ ಸದಸ್ಯ" ಹುದ್ದೆಯನ್ನು ಹಾಗೂ ಬೆಂಗಳೂರು ಪೀಠದಲ್ಲಿ ಸೆಪ್ಟೆಂಬರ್-2018ರಿಂದ ಖಾಲಿಯಾಗಲಿರುವ ಒಂದು ಆಡಳಿತ ಸದಸ್ಯ ಹುದ್ದೆಯನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಒಟ್ಟು 3 ಆಡಳಿತ ಸದಸ್ಯ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಿದೆ.

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆಡಳಿತ ಸದಸ್ಯರಾಗಿ ನೇಮಕಗೊಳ್ಳಲು ಅರ್ಹತೆಯನ್ನು ಆಡಳಿತ ನ್ಯಾಯ ಮಂಡಳಿ (ತಿದ್ದುಪಡಿ) ಅಧಿನಿಯಮ, 2006ರ ಪ್ರಕರಣ 6(2)(ಎ)ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

*6(2)* ಯಾವುದೇ ವ್ಯಕ್ತಿಯು ಈ ಕೆಳಗೆ ತಿಳಿಸಿರುವಂತಿಲ್ಲದಿದ್ದರೆ ನೇಮಕಾತಿಗೆ ಅರ್ಹವಾಗುವುದಿಲ್ಲ.

*(a)* ಆಡಳಿತ ಸದಸ್ಯರಾಗಲು ಆತ ಭಾರತ ಸರ್ಕಾರದ ಕಾರ್ಯದರ್ಶಿ ಹುದ್ದೆಯನ್ನು ಕನಿಷ್ಠ ಎರಡು ವರ್ಷಗಳ ಕಾಲ ಹೊಂದಿರದಿದ್ದಲ್ಲಿ ಅಥವಾ ರಾಜ್ಯ ಅಥವಾ ಭಾರತ ಸರ್ಕಾರದಲ್ಲಿ ಭಾರತ ಸರ್ಕಾರದ ಕಾರ್ಯದರ್ಶಿ ಹುದ್ದೆಯ ವೇತನ ಶ್ರೇಣಿಗೆ ಸಮಾನವಾದ ವೇತನ ಶ್ರೇಣಿಯ ಯಾವುದಾದರೂ ಹುದ್ದೆಯನ್ನು ಕನಿಷ್ಠ ಎರಡು ವರ್ಷಗಳ ಕಾಲ ಹೊಂದಿರದಿದ್ದಲ್ಲಿ ಅಥವಾ ಭಾರತ ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಯನ್ನು ಕನಿಷ್ಠ ಐದು ವರ್ಷಗಳ ಕಾಲ ಹೊಂದಿರದಿದ್ದಲ್ಲಿ ಅಥವಾ ರಾಜ್ಯ ಅಥವಾ ಭಾರತ ಸರ್ಕಾರದಲ್ಲಿ ಭಾರತ ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಿಲ್ಲದ ಹುದ್ದೆಯ ವೇತನ ಶ್ರೇಣಿಗೆ ಸಮಾನವಾದ ವೇತನ ಶ್ರೇಣಿಯ ಯಾವುದಾದರೂ ಹುದ್ದೆಯನ್ನು ಕನಿಷ್ಠ ಐದು ವರ್ಷಗಳ ಕಾಲ ಹೊಂದಿರದಿದ್ದಲ್ಲಿ;

ಆದಾಗ್ಯೂ ಕೇಂದ್ರ ಸರ್ಕಾರದಲ್ಲಿ ಕೆಳಹಂತದ ಹುದ್ದೆಗಳಿಗೆ ನಿಯೋಜನೆಗೊಂಡ ಅಥವಾ ನಿಯೋಜನೆಗೊಂಡಿರುವ ಅಖಿಲ ಭಾರತೀಯ ಸೇವೆಗಳಿಗೆ ಸೇರಿದ ಅಧಿಕಾರಿಗಳನ್ನು ಕಾರ್ಯದರ್ಶಿ ಅಥವಾ ಅಪರ ಕಾರ್ಯದರ್ಶಿ ಹುದ್ದೆಯನ್ನು ಹೊಂದಿರುವುದಾಗಿ ಪ್ರಕರಣಕ್ಕನುಸಾರವಾದಂತೆ ಪರಿಗಣಿಸಲ್ಪಡಲಾಗುವುದು. ಆ ಅಧಿಕಾರಿಗಳಿಗೆ ಪ್ರೋಫಾರ್ಮ ಪ್ರಮೋಷನ್ ಅಥವಾ ಸ್ಥಾನಪನ್ನ ಪ್ರಮೋಷನ್ (actual promotion) ನೀಡಿದ ದಿನಾಂಕದಿಂದ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕಾರ್ಯದರ್ಶಿ ಅಥವಾ ಅಪರ ಕಾರ್ಯದರ್ಶಿ ಮಟ್ಟದವರೆಗೆ ಪ್ರಕರಣಕ್ಕನುಸಾರವಾಗಿ ಮತ್ತು ಆ ದಿನಾಂಕದ ನಂತರ ಕೇಂದ್ರದಲ್ಲಿ ಕಳೆದ ನಿಯೋಜನಾ ಅವಧಿಯನ್ನು ಈ ನಿಯಮದಡಿ ಅರ್ಹತಾದಾಯಕ ಸೇವೆಗೆ ಪರಿಗಣಿಸಲ್ಪಡಲಾಗುವುದು. "

...........2

ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಆಡಳಿತ ಸದಸ್ಯ ಹುದ್ದೆಯ ಸೇವಾವಧಿ ಕುರಿತಂತೆ ಷರತ್ತುಗಳನ್ನು ಆಡಳಿತ ನ್ಯಾಯ ಮಂಡಳಿ(ತಿದ್ದುಪಡಿ) ಅಧಿನಿಯಮ, 2006ರ ಪ್ರಕರಣ 8(2) ಮತ್ತು (3)ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

"8(2) ಸದಸ್ಯರೊಬ್ಬರು ಅವರು ಹುದ್ದೆ ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಹಾಗೂ ಮತ್ತೊಮ್ಮೆ ಐದು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಅವಧಿಗೆ ಹುದ್ದೆಯನ್ನು ಹೊಂದಬಹುದು.

ಆದಾಗ್ಯೂ ಯಾವುದೇ ಸದಸ್ಯ ಅರವತ್ತೈದು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ ನಂತರ ಹುದ್ದೆಯನ್ನು ಹೊಂದುವಂತಿಲ್ಲ.

(3) ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಅನ್ವಯಿಸುವ ಸೇವಾ ನಿಯಮಗಳು ನ್ಯಾಯಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೂ ಅನ್ವಯವಾಗುವುವು."

ಆಡಳಿತ ಸದಸ್ಯ ಹುದ್ದೆಗೆ ನೇಮಕಗೊಳ್ಳುವ ವ್ಯಕ್ತಿಯು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಯಾವುದೇ ಪೀಠಕ್ಕೆ ಸರದಿಯನುಸಾರ ವರ್ಗಾವಣೆ ಹೊಂದಲು ಬಾಧ್ಯರಾಗಿರತಕ್ಕದ್ದು.

ಆಡಳಿತ ಸದಸ್ಯರ ಆಯ್ಕೆ, ನೇಮಕಾತಿ ಮತ್ತು ಸೇವಾ ಷರತ್ತುಗಳು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿ(ಸಿವಿಲ್)ಸಂಖ್ಯೆ:279/2017 ಮತ್ತು ಸಂಬಂಧಿಸಿದ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಮೇಲೆ ತಿಳಿಸಿರುವ ಷರತ್ತುಗಳನ್ನು ಪೂರೈಸುವ ಮತ್ತು **'ಆಡಳಿತ ಸದಸ್ಯ'** ಹುದ್ದೆಯ ಆಯ್ಕೆಗಾಗಿ ಪರಿಗಣಿಸಲ್ಪಡಲು ಇಚ್ಛೆಯುಳ್ಳ ವ್ಯಕ್ತಿಗಳು ತಮ್ಮ ಇಚ್ಛೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಈ ಕೆಳಗೆ ತಿಳಿಸಿರುವ ನಮೂನೆಯಲ್ಲಿ ಅವರ ವೈಯಕ್ತಿಕ ವಿವರಗಳೊಂದಿಗೆ (**Career Profile**) ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45 ದಿನಗಳ ಒಳಗಾಗಿ ತಿಳಿಸುವಂತೆ ಸೂಚಿಸಿದೆ.

## ವೈಯಕ್ತಿಕ ವಿವರ

ಹೆಸರು :
ಜನ್ಮ ದಿನಾಂಕ :
ವಿದ್ಯಾರ್ಹತೆ :
ಸರ್ಕಾರದ ಸೇವೆಗೆ ನೇಮಕಾತಿ ಹೊಂದಿದ ಬಗ್ಗೆ ವಿವರ :

ಭಾರತೀಯ ಆಡಳಿತ ಸೇವೆಗೆ ನೇಮಕಾತಿ ಹೊಂದಿದ ಬಗ್ಗೆ ವಿವರ :

| ಕ್ರ ಸಂ. | ಹುದ್ದೆಯ ವಿವರ | ಅವಧಿ | |
|---|---|---|---|
| | | ಇಂದ | ವರೆಗೆ |
| 1 | 2 | 3 | 4 |
| | | | |

*****

(ಸಹಿ) 19/02/18
ಎ.ವಿ. ಶ್ಯೈಲಜ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವಾ ನಿಯಮಗಳು-2)